

# ಕ್ರೀಡಾ 'ತಾರೆ' ತಾಪ್ಸೀ

ಸಕ್ಸೆಸ್ ಸ್ಟೋರಿಗಳ ಬೆನ್ನು ಹತ್ತುವುದು ಇತ್ತೀಚೆಗೆ ಬಾಲಿವುಡ್‌ಗೆ ಅಭ್ಯಾಸವಾದಂತಿದೆ. ಅದರಲ್ಲೂ ಮುಖ್ಯವಾಗಿ ಕ್ರೀಡಾರಂಗದಲ್ಲಿ ಸುದ್ದಿ ಸಾಧನೆ ಮಾಡಿದ ತಾರೆಯರ ಜೀವನವನ್ನೇ ತೆರೆಗೆ ತರುವುದು ಹೆಚ್ಚು ಸುಲಭದ ಕೆಲಸ ಎಂದು ಬಾಲಿವುಡ್‌ನ ಬಹುತೇಕ ನಿರ್ಮಾಪಕರು ತಿಳಿದುಕೊಂಡಂತಿದೆ. ಯಶಸ್ವೀ ಕ್ರೀಡಾತಾರೆಯರ ಸಿನಿಮಾ ಎಂದಾಗ ಪ್ರೇಕ್ಷಕರಿಗೆ ಸಹಜವಾಗಿ ಕುತೂಹಲ ಇರುತ್ತದೆ. ಈ ಕುತೂಹಲದಿಂದಾಗಿ ಸಿನಿಮಾ ನೋಡುವವರ ಸಂಖ್ಯೆಯೂ ಹೆಚ್ಚೇ ಇರುತ್ತದೆ ಎನ್ನುವುದು ಬಾಲಿವುಡ್ ಲೆಕ್ಕಾಚಾರ. ಅದಕ್ಕೆ ತಕ್ಕಂತೆ ಸಾಲು ಸಾಲಾಗಿ ಕ್ರೀಡಾತಾರೆಯರ ಕುರಿತ ಚಿತ್ರಗಳು ಸಿದ್ಧವಾಗುತ್ತಿವೆ.

ಸದ್ಯಕ್ಕೆ ಬಾಲಿವುಡ್‌ನಲ್ಲಿರುವ ನಟಿಯರ ಪೈಕಿ ತಾಪ್ಸೀ ಪನ್ನೂ ಈ ಕೀಡಾತಾರೆಯರ ಕಥಾನಕಕ್ಕೆ ಹೆಚ್ಚು ಫೇವರೆಟ್! ಪ್ರತಿದಿನ ಫಿಟ್‌ನೆಸ್ ವರ್ಕಿಂಗ್ ನಡೆಸುವ ತಾಪ್ಸೀ ದೇಹವೂ ಕ್ರೀಡಾಪಟುಗಳ ಪಾತ್ರಕ್ಕೆ ಒಪ್ಪುವಂತಿದೆ. ನವೆಂಬರ್‌ನಲ್ಲಿ ಶೂಟಿಂಗ್ ಆರಂಭವಾಲಿರುವ 'ರಶ್ಮಿ ರಾಕೆಟ್' ಚಿತ್ರಕ್ಕೆ ನಾಯಕಿಯಾಗಿ ಆಯ್ಕೆ ಆಗಿರುವ ತಾಪ್ಸೀ, ಹೊಸ ಪಾತ್ರದ ಸಿದ್ಧತೆಯಲ್ಲಿ ತೊಡಗಿದ್ದಾಳೆ. ಗುಜರಾತ್‌ನ ವೇಗದ ಓಟಗಾರ್ತಿ ರಶ್ಮಿಯ ಜೀವನಕಥೆಗೆ ತಾಪ್ಸೀ ಜೀವ ತುಂಬಲಿದ್ದಾಳೆ. ದೇಹವನ್ನು ಕ್ರೀಡಾಳುಗಳ ಆಂಗಿಕಕ್ಕೆ ಒಗ್ಗಿಸುವ ನಿಟ್ಟಿನಲ್ಲಿ ತಾಪ್ಸೀ ಈಗಾಗಲೆ ಡಯಟ್ ಶುರು ಮಾಡಿದ್ದಾಳೆ. ಕಳೆದ ವಾರ ಈಕೆ ಬೆಳಿಗ್ಗೆ ಎದ್ದು ಗೆಣಸಿನ ತಿನಿಸುಗಳನ್ನು ತಿನ್ನುವ ಫೋಟೊ ಸಾಮಾಜಿಕ ಜಾಲತಾಣದಲ್ಲಿ ರಾರಾಜಿಸುತ್ತಿದೆ. ಹೆಚ್ಚು ಕಾರ್ಬೋಹೈಡ್ರೇಟ್ ಇರುವ ಆಹಾರವನ್ನು ಸೇವಿಸುವಂತೆ ಆಕೆಯ ಫಿಟ್‌ನೆಸ್ ಸಲಹೆಗಾರ್ತಿ ಸಲಹೆ ನೀಡಿದ್ದಾಳಂತೆ.

ಇದೊಂದೇ ಅಲ್ಲ, ಕ್ರೀಡಾಳುಗಳ ಕಥೆಯುಳ್ಳ ಇನ್ನೂ ಎರಡು ಸಿನಿಮಾಗಳಿಗೂ ತಾಪ್ಸೀ ಸಹಿ ಹಾಕಿದ್ದಾಳೆ. ಇಂಗ್ಲಿಷ್‌ನಲ್ಲಿ ಯಶಸ್ವಿ ಪ್ರದರ್ಶನ ಕಂಡ 'ರನ್ ಲೋಲಾ ರನ್'ನ ಹಿಂದಿ ರಿಮೇಕ್‌ಗೂ ತಾಪ್ಸೀ ನಾಯಕಿ. ಅದನ್ನು ಹಿಂದಿಯಲ್ಲಿ 'ಲೂಪ್ ಲುಟೇರಾ' ಎಂಬ ಹೆಸರಲ್ಲಿ ನಿರ್ಮಿಸಲಾಗುತ್ತಿದೆ. ಭಾರತೀಯ ಮಹಿಳಾ ಕ್ರಿಕೆಟ್‌ನಲ್ಲಿ ಸಾಕಷ್ಟು ಸಾಧನೆ ಮೆರೆದ ಮಿಥಾಲಿ ರಾಜ್ ಅವರ ಜೀವನ ಕಥೆಯನ್ನು ಆಧರಿಸಿದ ಇನ್ನೊಂದು 'ಶಾಬ್ಬಾಸ್ ಮಿಥು' ಚಿತ್ರಕ್ಕೂ ತಾಪ್ಸೀ ನಾಯಕಿ. ಮಹಿಳೆಯರ ಕ್ರಿಕೆಟ್‌ನಲ್ಲಿ ಮಿಥಾಲಿಯ ಸಾಧನೆ ಹಲವು ಹೊಸಬರಿಗೆ ಸ್ಫೂರ್ತಿ ಆದದ್ದು ಸುಳ್ಳಲ್ಲ. ಮಹಿಳಾ ಕ್ರಿಕೆಟಿಗರ ಪೈಕಿ ಮಿಥಾಲಿ ಅತ್ಯಂತ ಹೆಚ್ಚು ಜನಪ್ರಿಯತೆಯನ್ನೂ ಪಡೆದವರು. ಈ ಪಾತ್ರಕ್ಕೆ ತಾಪ್ಸಿಯೇ ಸೂಕ್ತ ಎನ್ನುವುದು ನಿರ್ಮಾಪಕರ ನಿರ್ಧಾರವಂತೆ.

ತಾಪ್ಸೀ ಪನ್ನೂ ಏನೇ ಮಾಡಿದರೂ ಸುದ್ದಿಯಾಗುತ್ತದೆ. ವರ್ಷದ ಆರಂಭದಲ್ಲಿ ಆಕೆ ನಟಿಸಿದ 'ಥಪ್ಪಡ್' ವಿಭಿನ್ನ ಕಥೆಯಿಂದಾಗಿ ಗಮನ ಸೆಳೆದಿತ್ತು. ಬಾಲಿವುಡ್‌ನ ಇತರ ನಟಿಯರಂತೆ ಕುಣಿಯುವ ಗೊಂಬೆಯಾಗಲು ಸಿದ್ಧಳಿಲ್ಲದ ತಾಪ್ಸೀ, ಅತ್ಯುತ್ತಮ ನಟನೆಯಿಂದಲೇ ಅಪಾರ ಸಂಖ್ಯೆಯ ಅಭಿಮಾನಿಗಳನ್ನೂ ಹೊಂದಿದ್ದಾಳೆ.



# ಟ್ರೋಲ್ ಕಪೂರ್!

ಸುಶಾಂತ್‌ಸಿಂಗ್ ಆತ್ಮಹತ್ಯೆ ಮಾಡಿಕೊಂಡ ಬಳಿಕ ಬಾಲಿವುಡ್‌ನಲ್ಲಿರುವ ತಾರೆಯರು ಮತ್ತು ನಿರ್ಮಾಪಕರ ಮಕ್ಕಳು ಸಾಕಷ್ಟು ಆತಂಕಗಳನ್ನು ಎದುರಿಸುವಂತಾಗಿದೆ. ಅಪ್ಪಅಮ್ಮನ ನಾಮಬಲದಿಂದ ಬಾಲಿವುಡ್‌ನಲ್ಲಿ ಅವಕಾಶಗಳನ್ನು ಗಿಟ್ಟಿಸಿಕೊಳ್ಳುವುದು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಲೇವಡಿಗೆ ಒಳಗಾಗುತ್ತಿದೆ. ಬಹಳಷ್ಟು ತಾರೆಯರು ಸಿಟ್ಟಿಗೆದ್ದ ಪ್ರೇಕ್ಷಕರಿಂದ ಟ್ರೋಲ್‌ಗೆ ಒಳಗಾಗುತ್ತಿದ್ದಾರೆ. ಸದ್ಯಕ್ಕೆ ಹೀಗೆ ಟ್ರೋಲ್‌ಗೆ ಸಿಕ್ಕು ಹಿಗ್ಗಾಮುಗ್ಗಾ ಬೈಸಿಕೊಳ್ಳುತ್ತಿರುವಾತ ಅರ್ಜುನ್ ಕಪೂರ್. ಬಾಲಿವುಡ್‌ನ ಈ ಸುರಸುಂದರಾಂಗ ನಟ, ಒಂದರ ಹಿಂದೆ ಒಂದರಂತೆ ಸಿನಿಮಾಗಳಲ್ಲಿ ನಟಿಸುತ್ತಿದ್ದರೂ, ಆರಕ್ಕೇರಿಲ್ಲ, ಮೂರಕ್ಕೆ ಇಳಿದಿಲ್ಲ. ಆದರೆ ಈಗ ಬರುತ್ತಿರುವ ಟೀಕೆಗಳನ್ನು ಗಮನಿಸಿದರೆ ಈತ ಮೂರರಿಂದಲೂ ಕೆಳಕ್ಕೆ ಇಳಿಯುವ ಸಾಧ್ಯತೆಗಳಿವೆ.

ಅರ್ಜುನ್ ಕಪೂರ್, ಖ್ಯಾತ ನಿರ್ಮಾಪಕ ಬೋನಿ ಕಪೂರ್ ಮತ್ತು ನಟಿ ಮೋನಾ ಕಪೂರ್ ಮಗ. ಈತ ನಟಿಸಲಿರುವ ಹೊಸ ಚಿತ್ರದ ಬಗ್ಗೆ ಈಗಾಗಲೇ ಪ್ರಚಾರ ಶುರುವಾಗಿದೆ. ಚಿತ್ರದಲ್ಲಿ ಅರ್ಜುನ್ ಜೊತೆಗೆ ರಕುಲ್‌ಪ್ರೀತ್ ಸಿಂಗ್, ಜಾನ್ ಅಬ್ರಹಾಂ ಮತ್ತು ಆದಿತಿ ಹೈದರಿ ನಟಿಸುವ ಸುದ್ದಿಯೂ ಹೊರಬಿದ್ದಿದೆ. ಆದರೆ ಸಾಮಾಜಿಕ ಜಾಲತಾಣದಲ್ಲಿ ಜನರು ಒಂದೇ ಸಮನೆ ಅರ್ಜುನ್‌ನನ್ನು ಟೀಕಿಸುತ್ತಿದ್ದಾರೆ. 'ಸಿನಿಮಾದವರ ಮಕ್ಕಳು ಎಂಬ ಏಕೈಕ ಕಾರಣಕ್ಕಾಗಿ ಸಿನಿಮಾಗಳಲ್ಲಿ ಅವಕಾಶ ಸಿಗುತ್ತಿದೆ. ಆದರೆ ಈ ಸಿನಿಮಾ ಓಡುವುದಿಲ್ಲ' ಎಂದು ಹಲವರು ಭವಿಷ್ಯ ನುಡಿದಿದ್ದಾರೆ. ಕೆಲವರು ಅರ್ಜುನ್‌ನನ್ನು ಕೈಬಿಡಿ ಎಂಬ ಪ್ರಚಾರವನ್ನೂ ಆರಂಭಿಸಿದ್ದಾರೆ. 'ಇತ್ತೀಚೆಗೆ ಪಾಣಿಪತ್ ಸಿನಿಮಾದಲ್ಲಿ ಈತನ ಅಭಿನಯ ನೋಡಿ ಸುಸ್ತಾದೆ. ಆ ಚಿತ್ರ ನೆಲ ಕಚ್ಚಲು ಅರ್ಜುನ್ ಕಳಪೆ ನಟನೆಯೇ ಕಾರಣ' ಎಂದೊಬ್ಬ ಕಿಡಿ ಕಾರಿದ್ದಾನೆ.

ಕಳೆದ ಐದಾರು ವರ್ಷಗಳಲ್ಲಿ ತೆರೆ ಕಂಡ ಈತನ ಹಲವು ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ವಿಫಲಗೊಂಡಿವೆ. ನಮಸ್ತೆ ಇಂಗ್ಲೆಂಡ್, ಮುಬಾರಕಾನ್, ಹಾಫ್ ಗರ್ಲ್‌ಫ್ರೆಂಡ್ ಮುಂತಾಗಿ ಯಾವ ಚಿತ್ರಗಳೂ ಈತನಿಗೆ ತಾರಾಮೌಲ್ಯ ತಂದುಕೊಟ್ಟಿಲ್ಲ. ಹಾಗಿದ್ದೂ ಈತನಿಗೆ ಚಿತ್ರಗಳ ಕೊರತೆ ಇಲ್ಲ. ಈ ವರ್ಷ 'ಗುಟ್ಕಾ' ಮತ್ತು 'ಸಂದೀಪ್ ಔರ್ ಪಿಂಕಿ ಫರಾರ್' ಎಂಬ ಇನ್ನೂ ಎರಡು ಚಿತ್ರಗಳಲ್ಲಿ ಈತ ನಟಿಸುತ್ತಿದ್ದಾನೆ.

■ ಬಿಂದು